

◆ ನೀವು ಆಧುನಿಕ ಹಿಂದಿ ಕಾವ್ಯದ ಸಮಸ್ಯೆಗಳನ್ನು ಕುರಿತು ಮಾತನಾಡುವಾಗ ಉರ್ದುವಿನ ಪ್ರಸ್ತಾಪ ಮಾಡಿದಿರಿ. 'ಉರ್ದು ಭಾಷೆ ಮತ್ತು ಸಾಹಿತ್ಯದಿಂದ ಅಂತರ ಕಾಪಾಡಿಕೊಂಡಿರುವುದರಿಂದ ಹಿಂದಿ ಕಾವ್ಯ ಅನೇಕ ಮಿತಿಗಳಿಗೆ ಒಳಗಾಗುತ್ತಿದೆ. ಒಂದು ನದಿಯ ಎರಡು ದಡಗಳಂತೆ ಈ ಭಾಷೆಗಳಿವೆ. ಆದರೆ ನಡುವೆ ಹರಿಯುತ್ತಿರುವ ನೀರು ಮಾತ್ರ ಒಂದೇ ಆಗಿದೆ. ಹಿಂದಿಯಲ್ಲಿ ಗಜಲ್ ಬರೆಯುವವರಿಗೂ ಉರ್ದುವಿನ ಅಧ್ಯಯನವಿಲ್ಲ. ಇದರಿಂದ ಹಿಂದಿ ಕಾವ್ಯದ ಅಂತಸ್ಸತ್ವ ಕುಸಿಯುತ್ತಿದೆ' ಅಂತ.

ಹಿಂದಿ ಮತ್ತು ಉರ್ದುವಿನ ಸಂಬಂಧವನ್ನು ಹೇಳುವಾಗ ಇಂಥ ಅನೇಕ ಮಾತುಗಳನ್ನು ನಾನು ಹೇಳಿರುವೆ. 'ದಿವಾನ್ ಎ ಮೀರ್' ಸದಾ ನನ್ನ ಇಷ್ಟದ ಪುಸ್ತಕ. ಹಿಂದಿ ಮತ್ತು ಉರ್ದು ಖಡೀ ಬೋಲಿಯಲ್ಲಿ ಇರುವ ಭಾಷೆಗಳು. ನುಡಿಗಟ್ಟುಗಳು ಬೇರೆ ಬೇರೆ ಇರಬಹುದು. ಆದರೆ ಇವೆಲ್ಲ ಮೂಲದಲ್ಲಿ ಒಂದೇ ಆಗಿದ್ದವು. ಉರ್ದು ಮೂಲತಃ ಹೇಳುವ ಕಾವ್ಯ, ಅದು ಓದುವ ಕಾವ್ಯ ಅಲ್ಲ. ಈ ಹೇಳುವ ಗುಣವನ್ನು ಉರ್ದು ಕಾವ್ಯದಿಂದ ಕಲಿಯಬೇಕು. ಈ ಹೇಳುವ ನುಡಿಗಟ್ಟುಗಳನ್ನು ಅಲ್ಲಿಂದ ಕಂಡುಕೊಳ್ಳಬೇಕು. ಮೀರ್, ಗಾಲಿಬ್, ನಜೀರ್, ಇಕ್ಬಾಲ್, ಫಿರಾಕ್, ಫೈಜ್ ಇವರನ್ನು ಓದದಿದ್ದರೆ ನಮಗೆ ನಿಜಕ್ಕೂ ನಷ್ಟ. ಇವರಿಂದ ನಾವು ನಿರಂತರವಾಗಿ ಕಲಿಯಬೇಕು. ನಾನು ಹೇಳುತ್ತಿರುವುದರ ಅರ್ಥ ಇಷ್ಟೆ. ಅವರೂ ಕೂಡ ನಮ್ಮ ಪರಂಪರೆಯವರು. ಹಾಗೆಯೇ ಸಂಸ್ಕೃತ ಕವಿಗಳಿಂದಲೂ ಕಲಿಯಬೇಕು. ಎಲ್ಲರಿಂದ ಕಲಿಯಬೇಕು. ಇಲ್ಲವಾದರೆ ಭಾಷೆಯ ದೊಡ್ಡ ಸಂಪತ್ತೊಂದರಿಂದ ನಾವು ವಂಚಿತರಾಗುತ್ತೇವೆ.

◆ ಕಳೆದ ಎರಡು ದಶಕಗಳ ಹಿಂದಿ ಕಾವ್ಯದ ಬೆಳವಣಿಗೆ ನಿಮ್ಮಲ್ಲಿ ಎಂಥ ಭಾವ ಮತ್ತು ನಿರೀಕ್ಷೆಗಳನ್ನು ಹುಟ್ಟಹಾಕಿದೆ? ಈ ಬೆಳವಣಿಗೆ ಆಶಾದಾಯಕವಾಗಿದೆಯೆ?

ನಾನು ಹೊಸ ಕವಿಗಳನ್ನು ತುಂಬಾ ಓದುತ್ತೇನೆ. ಯಾಕೆಂದರೆ ಬದಲಾಗುತ್ತಿರುವ ಜೀವನದ ಬಿಂಬಗಳು ಮೊದಲಿಗೆ ಕಂಡುಬರುವುದು ಇಂಥ ಹೊಸ ಕವಿಗಳಲ್ಲಿ ಮಾತ್ರ. ಎಲ್ಲಾ ನಡೆಗಳು ಕೂಡ ನನಗೆ ಆಶಾದಾಯಕವೆ. ಪ್ರತಿಯೊಂದು ದಾರಿ ಕೂಡ ಅನೇಕರ ಹೆಜ್ಜೆಗಳಿಂದಲೇ ನಿರ್ಮಾಣಗೊಂಡಿರುತ್ತದೆ. ಕೆಲವೊಂದು ದಾರಿಗಳು ದೂರ ಹೋಗಬಹುದು. ಕೆಲವೊಂದು ನಡು ದಾರಿಯಲ್ಲಿ ಮೊಟಕುಗೊಳ್ಳಬಹುದು. ಇರಲಿ, ಅದರ ಸಾರ್ಥಕತೆ ಅಷ್ಟೇ. ಈಗ ಹೆಣ್ಣುಮಕ್ಕಳು, ದಲಿತರು, ಆದಿವಾಸಿಗಳು ಹಿಂದಿಗೆ ಬಹಳ ಮಹತ್ವದ ಕಾವ್ಯ ಕೊಡುತ್ತಿದ್ದಾರೆ. ಒಂದು ಹೊಸ ಭಾಷೆಯನ್ನು ಅವರು ಹಿಂದಿಗೆ ಕೊಟ್ಟಿದ್ದಾರೆ.ಮೊದಲೂ ಸ್ತ್ರೀಯರಿದ್ದರು.ಆದರೆ ಹೆಚ್ಚು ಜನರಿರಲಿಲ್ಲ. ಈಗ ಅನೇಕರು ಕಾವ್ಯಲೋಕದಲ್ಲಿ ಗಂಭೀರವಾಗಿ ತೊಡಗಿಸಿಕೊಂಡಿದ್ದಾರೆ. ದಲಿತ ಕವಿಗಳ ಸಂಖ್ಯೆ ಕೂಡ ಹೆಚ್ಚಾಗಿದೆ. ಆದಿವಾಸಿ ಕವಿಗಳಂತೂ ಹಿಂದೆ ಇರಲೇ ಇಲ್ಲ. ಅವರೆಲ್ಲ ಈಗ